SRI S. M. YAHYA.—The hon. Member should understand the spirit of the programme, which is to create opportunities and also to give a new orientation to employment and this new orientation has been given by making different schemes of self-employment. Regarding the Scheduled Castes and Scheduled Tribes, we have also fulfilled whatever Constitutional safeguards there are in their behalf. But if the hon. Member wants certain new scheme so that the Scheduled Castes and Scheduled Tribes people may be safeguarded, such a new scheme has not been visualised under the Half a Million Jobs Scheme.

ಶ್ರೀ ಕೋಣಂದೂರು ಲಿಂಗಪ್ಪ,—ಈ ಯೋಜನೆಯು ಮೂಲಕ ನಮ್ಮ ರಾಜ್ಯದಲ್ಲಿ ಕೆಲವು ವೈದ್ಯರಿಗೆ ಸ್ಟೈಪೆಂಡರಿ ಬೇಸಿಸ್ ಮೇಲೆ ಟ್ರೈನಿಂಗ್ ಕೊಡಲಾಯಿತು. ಅವರುಗಳಿಗೆ ಈಗ ಕೆಲಸವಿಲ್ಲ, ರಾಜ್ಯ ಸರ್ಕಾರದವರನ್ನು ಕೇಳಿದರೆ ಕೇಂದ್ರ ಸರ್ಕಾರದವರನ್ನು ಕೇಳಿ ಎಂದು ಹೇಳುತ್ತಾರೆ, ಅವರನ್ನು ಕೇಳಿದರೆ ರಾಜ್ಯ ಸರ್ಕಾರದವರನ್ನು ಕೇಳಿ ಎಂದು ಹೇಳುತ್ತಾರೆ, ಇದರಿಂದ ಅವರು ತ್ರಿಶಂಕು ಸ್ವರ್ಗದಲ್ಲಿದ್ದಾರೆ. ಅವರದ್ದೇ ಆದ ಒಂದು ಅಸೋಷಿಯೇಷನ್ ಸಹ ಇದೆ. ಆದರೂ ಪ್ರಯೋಜನವಾಗಿಲ್ಲ, ಅವರಿಗೆ ಜಾಗ್ರತೆ ಕೆಲಸ ಒದಗಿಸುತ್ತೀರಾ ?

ಶ್ರೀ ಎಸ್. ಎಂ. ಯಹ್ಯಾ.—ಈ ಸ್ಕೀಮ್ ಏನಿದ್ದರೂ ಟ್ರೈನಿಂಗ್ ಕೊಡುವುದು ಅಷ್ಟೆ, ಟ್ರೈನಿಂಗ್ ಮುಂಗಿದ ಮೇಲೆ ಕೆಲಸ ಕೊಡುವುದಿಲ್ಲ, ಟ್ರೈನಿಂಗ್ ಮುಗಿದ ಮೇಲೆ ಅವರೇ ಸ್ವಂತವಾಗಿ ಕ್ಲಿನಿಕ್ ತೆಗೆದು ಟ್ರೈನಿಂಗ್‌ನ ಉಪಯೋಗ ಪಡೆದುಕೊಳ್ಳಬೇಕು.

SMT. DAMAYANTHI BORE GOWDA.—How many ladies and physically handicapped persons are benefited by this scheme ?

SRI S. M. YAHYA.—We have given opportunity for self-employment to such of those people, who have come forward and taken the opportunity offered.

9-30 A. M.

ಶ್ರೀ ಬಿ. ಜಿ. ಬಣಕಾರ್.—ಸ್ಪಾಮಿ. ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಗೊತ್ತಿದೆ ಎಂದು ಹೇಳಿದ್ದೀರಿ- ಈ ನೇಮಕಾತಿ ಮಾಡುವಾಗ ಕಡಿಮೆ ಮಾರ್ಕ್ಸ್ ತೆಗೆದುಕೊಂಡಥ ಗ್ರಾಮಾಂತರ ಪ್ರದೇಶದಲ್ಲಿರುವ ಎಸ್.ಎಸ್.ಎಲ್ ಸಿ. ಮತ್ತು ಪದವೀಧರರ ವಿದ್ಯಾರ್ಥಿಗಳಿಗೆ ಇಂಟರ್‌ವ್ಯೂ ಬರುತ್ತಾ ಇಲ್ಲ. ಆದಂದರಿಂದ ಇವರಿಗೆ ಅನುಕೂಲತೆ ಮಾಡಿಕೊಡುವ ದೃಷ್ಟಿಯಿಂದ ಏನು ಒಂದು ವ್ಯವಸ್ಥೆ ಮಾಡಿದ್ದೀರಿ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಎಂ. ಯಹ್ಯಾ.—ಟ್ರೈನಿಂಗ್ ಸ್ಕೀಮ್‌ನಲ್ಲಿ ಸೆಲೆಕ್ಷನ್ ಮಾಡುವಾಗ ಅವರ ಮಾರ್ಕ್ಸ್ ನೋಡಿಕೊಂಡು ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಇನ್‌ಫ್ಲ್ಯೂಯೆನ್ಸ್ ಜಾಸ್ತಿಯಾಗಿ ಯಾರು ಮೆರಿಟ್ ಮೇಲೆ ಬರಬೇಕೋ ಅವರು ಬರುವುದಕ್ಕಾಗುವುದಿಲ್ಲ. ಆದುದರಿಂದ ಮೆರಿಟ್ ಪ್ರಕಾರವೇ ಇಂಟರ್‌ವ್ಯೂ ಮಾಡಬೇಕಾಗುತ್ತದೆ.

* *Preservation of Forest Wealth*

161. Sri T. R. SHAMANNA (Fort).—

Will the Minister for food and Forests be pleased to state.

the steps taken to conserve forest trees and for growing more trees in Malnad and other area to preserve forest wealth of the State?

Sri K. H. PATIL (Minister for Food and Forest).—

Various steps have been taken by the Government in this regard.

Indiscriminate release of forest lands have been stopped. Forest Act has been amended to provide for concurrence of Legislature before releasing forest area, To obviate delay in eviction, forest officers have been delegated with powers to remove encroachments in forests. The past practices of giving forest land on annual leases have been stopped. Boundaries of forests where encroachments are suspected are re-surveyed and encroachments are removed.

In addition to taking up increased planting operation by the department. Karnataka Forest Plantation Corporation has been established to take up large scale plantation of industrial and economic species with Institutional finances. Plantation schemes proposed by the Department and the Corporation during Fifth Five Year Plan is of the order of Rupees One Thousand Seven Hundred lakhs and scheme costing around Rupees Three Hundred lakhs has also been proposed under Malnad Development, proposed to be taken up by the Government of India. In the natural forests tending is taken up to benefit economic species.

Annually at prasent a total area of 73,500 acres is afforested or reforested. Smuggling has been reduced by intensifying protection measures, arming the forest subordinates, creating secret service fund awarding incentives to honest subordinates, making the punishment more deterrent and creating a special Forest Cell.

ಶ್ರೀ ಟಿ. ಆರ್. ಶಾಮಣ್ಣ.—ಈಗ ಕೆಲವು ವರ್ಷಗಳಿಂದ ಮರಗಳನ್ನು ಕಡಿಯುವುದು ಜಾಸ್ತಿಯಾಗಿದೆಯೇ ಹೊರತು ಅದನ್ನು ಬೆಳೆಸುವುದರ ಕಡೆ ಹೆಚ್ಚು ಗಮನ ಇಲ್ಲ. ಅದರಲ್ಲೂ ದೇಶದಲ್ಲಿರುವ ಬಿರ್ಲಾ ಮತ್ತು ದಾಂಡೇಲಿ ಕಾರ್ಖಾನೆಗೆ ಹೆಚ್ಚು ಮರಗಳನ್ನು ಕೊಟ್ಟಿದ್ದರಿಂದ ದೇಶದ ಆರ್ಥಿಕ ಪರಿಸ್ಥಿತಿಗೆ ಹೆಚ್ಚು ನಷ್ಟವಾಗುವುದಲ್ಲದೆ ವನಸಂಪತ್ತೂ ಕೂಡ ನಿರ್ಮೂಲವಾಗುವುದಿಲ್ಲವೇ ?

† ಶ್ರೀ ಕೆ. ಹೆಚ್ ಪಾಟೀಲ್.—ಮಾನ್ಯ ಸದಸ್ಯರು ಮರಗಳನ್ನು ಕಡಿಯುವುದರ ಕಡೆ ಜಾಸ್ತಿ ಗಮನ ಕೊಟ್ಟಿದ್ದಾರೆಯೇ ವಿನಾ ಮರಗಳನ್ನು ಹೆಚ್ಚುವ ಕಡೆ ಜಾಸ್ತಿ ಗಮನ ಕೊಟ್ಟಿರುವ ಹಾಗೆ ಕಾಣುತ್ತಾ ಇಲ್ಲ. ಮರಗಳನ್ನು ಕಡಿಯುವುದು ಹೇಗೆ ಜಾಸ್ತಿಯಾಗಿದೆಯೋ ಅದರಂತೆ ಮರಗಳನ್ನು ಹಚ್ಚುವ ಸಂಖ್ಯೆಯೂ ಜಾಸ್ತಿಯಾಗಿದೆ.

ಇನ್ನು ಎರಡನೆಯದಾಗಿ ಬಿರ್ಲಾ ಮತ್ತು ದಾಂಡೇಲಿ ಕಾರ್ಖಾನೆಗೆ ಹೆಚ್ಚು ಮರಗಳನ್ನು ಕೊಟ್ಟಿದ್ದರಿಂದ ವನಸಂಪತ್ತು ನಿರ್ಮೂಲವಾಗುವುದಲ್ಲದೆ ದೇಶದ ಆರ್ಥಿಕ ಪರಿಸ್ಥಿತಿಗೂ ಕಷ್ಟವಾಗುತ್ತಿದೆ ಎಂದು ಏನು ಹೇಳಿದರು ಆ ಬಗ್ಗೆ ಉತ್ತರ ಹೇಳುವುದಕ್ಕೆ ನಿಸ್ಸಹಾಯಕನಾಗಿದ್ದೇನೆ.

ಶ್ರೀ ಟಿ. ಆರ್. ಶಾಮಣ್ಣ.—ಮಳೆಗೆ ಹೆಸರಾದಂಥ ಮಲೆನಾಡಿನಲ್ಲಿ ಮರಗಳನ್ನು ಹೆಚ್ಚಿಗೆ ಕಡಿದು ಹಾಕಿದ್ದರಿಂದ ಅಲ್ಲಿ ಮಳೆ ಕಡಿಮೆಯಾಗುತ್ತಿದೆ. ಅಲ್ಲದೆ ಎಲೆಕ್ಟ್ರಿಸಿಟಿ ಉತ್ಪಾದನೆ ಆಗತ್ಯಕ್ಕಿಂತ ಅನೇಕ ಪ್ರದೇಶಗಳಲ್ಲೂ ಕೂಡ ಮರಗಳು ಇಲ್ಲದೆ, ಮಳೆ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದುದರಿಂದ ಈಗಲಾದರೂ ಕೂಡ ಮಳೆ ಬರುವ ಪ್ರದೇಶಗಳಲ್ಲಿ ವೃಕ್ಷಗಳನ್ನು ಬೆಳೆಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಅದು ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಇದರ ಬಗ್ಗೆ ಸರ್ಕಾರ ತನಿಖೆ ಮಾಡುತ್ತಿದೆ.

ಶ್ರೀ ಕೊಣಂದೂರು ಲಿಂಗಪ್ಪ.—ಇದು ಒಂದು ವಿವಂಚನೆ ವಿಷಯ. ಕೆಲವು ಶಾಸ್ತ್ರಜ್ಞರು, ವಿಜ್ಞಾನಿಗಳು ಏನು ಹೇಳುತ್ತಾರೆ ಎಂದರೆ ಮಳೆ ಬರುವುದಕ್ಕೆ ಕಾಡು ಅವಶ್ಯಕ ಇದೆ ಎಂದು. ಹಾಗಾದರೆ ಮುಂಬೈ ಬೆಳಗಾಂ ಮತ್ತು ಗುಲ್ಬರ್ಗದಲ್ಲಿ ಕಾಡು ಇಲ್ಲದಿದ್ದರೂ ಮಳೆ ಏತಕ್ಕೆ ಬರುತ್ತಿದೆ ? ಅಲ್ಲಿ ಕಾಡು ಇಲ್ಲದಿದ್ದರೂ ಮಳೆ ಬರುತ್ತಿಲ್ಲವೇ ? ಮತ್ತು ಮಳೆ ಬರುವುದಕ್ಕೆ ಕಾಡು ಇರಬೇಕು ಎನ್ನುವುದೂ ಕೂಡ ಒಂದು ವಿಚಾರವೂ ಇದೆ. ಆದುದರಿಂದ ನಾನು ಹೇಳುವುದು ಏನೆಂದರೆ ಭೂಹೀನ ರೈತರು ಸಣ್ಣವರು ಕಾಡು ಇಲ್ಲದೇ ಇರುವ ಕಡೆ ಒಂದು ಎಕರೆ, ಅರ್ಧ ಎಕರೆ ಇರುವವರು ಮರಗಳನ್ನು ಕಡಿದುಕೊಂಡರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ. ಆದರೆ ದೊಡ್ಡವರು ಆ ಕೆಲಸವನ್ನು ಮಾಡಿದರೆ ದುಡ್ಡು ಕೊಟ್ಟು ಬಿಡಿಸಿಕೊಳ್ಳುತ್ತಾರೆ. ಅವರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಅದು ಕಾನೂನಿಗೆ ವಿರುದ್ಧವಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—ಕಾಡು ಇಲ್ಲದೆ ಹೋದರೂ ಕೂಡ ಮಳೆ ಬರುತ್ತದೆ ಎಂದು ನಮ್ಮ ಅಭಿಪ್ರಾಯವಲ್ಲ, ಅದನ್ನು ಶಾಸ್ತ್ರಜ್ಞರೂ ಕೂಡ ಒಪ್ಪಿಲ್ಲ.

ಇನ್ನು ಎರಡನೇದು ಸಣ್ಣವರು ಮರ ಕಡಿದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ' ಅದೇ ದೊಡ್ಡವರು ಆ ಕೆಲಸ ಮಾಡಿದರೆ ಅವರನ್ನು ಬಿಟ್ಟು ಬಿಡುತ್ತಾರೆ ಎನ್ನುವುದು ಸರಿಯಲ್ಲ. ಆ ಕಾನೂನಿಗೆ ಮೀರಿದವರು ಸಣ್ಣವರೇ ಇರಲಿ, ದೊಡ್ಡವರೇ ಇರಲಿ ಅವರು ಆ ಅಪರಾಧಕ್ಕೆ ಗುರಿಯಾಗುತ್ತಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಪ್ರತಿವಿ, ಪಶ್ಚಿಮ ಘಟ್ಟದಲ್ಲಿ ಯಥೇಚ್ಛವಾಗಿದ್ದಂಥ ಕಾಡನ್ನು ನಿಮ್ಮ ಇಲಾಖೆಯವರೂ ಸೇರಿಕೊಂಡು ನಿರ್ಮೂಲ ಮಾಡುತ್ತಿದ್ದಾರೆ. ಈ ಕೆಲಸ ಪ್ರತಿನಿತ್ಯದ ವ್ಯವಹಾರ ಆಗಿ ಹೋಗಿಬಿಟ್ಟಿದೆ. ಕೆಲವು ಸಂದರ್ಭದಲ್ಲಿ ಕಳ್ಳರನ್ನು ಹಿಡಿದು ಕೇಸು ಹಾಕುತ್ತಾರೆ, ಅದಕ್ಕೆ ಅಲ್ಪ ಸ್ವಲ್ಪ ದಂಡವನ್ನು ಹಾಕಿ ಬಿಟ್ಟುಬಿಡುತ್ತಾರೆ, ಇದು ಒಂದನೆಯದು.

ಎರಡನೆಯದಾಗಿ ಅವರ ಹತ್ತಿರ ದುಡ್ಡು ತೆಗೆದುಕೊಂಡು ಬಿಟ್ಟುಬಿಡುವ ಸಂದರ್ಭವೂ ಉಂಟು.

ಮೂರನೆಯದಾಗಿ ಯಾರು ಮರಗಳನ್ನು ಕಡಿಯುತ್ತಾರೋ ಅವರ ಹತ್ತಿರ ದುಡ್ಡು ತೆಗೆದುಕೊಂಡು ನೆಪಕ್ಕೆ ಮಾತ್ರ ಒಂದು ಕೇಸು ಹಾಕಿ ಆ ದುಡ್ಡನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಪ್ರತಿನಿತ್ಯವೂ ಈ ವ್ಯವಹಾರ ನಡೆಯುತ್ತಾ ಇದೆ. ಆದುದರಿಂದ ನಾನು ಈ ಬಗ್ಗೆ ಒಂದು ಸಲಹೆ ಕೊಡುವುದು ಏನೆಂದರೆ ಯಾರು ಕಾಡನ್ನು ಕಡಿಯುತ್ತಾರೋ ಅವರ ಮೇಲೆ ಒಂದು ಬಿಗಿಯಾದ ಕ್ರಮವನ್ನು ತೆಗೆದುಕೊಂಡರೆ ಅದನ್ನು ತಪ್ಪಿಸಬಹುದು. ಆ ರೀತಿ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ನನಗಿಂತಲೂ ಹೆಚ್ಚು ವಿಚಾರ ಗೊತ್ತಿದೆ. ಆದುದರಿಂದ ಇದರ ಬಗ್ಗೆ ಬಿಗಿಯಾದ ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕು ಎನ್ನುವುದನ್ನು ವಿಚಾರ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಮಲೆನಾಡು ಪ್ರದೇಶದಲ್ಲಿ ದಟ್ಟವಾದ ಕಾಡುಗಳು ಇವೆ. ಆದನ್ನು ರೆವ್ಯೂನರೇಟೀವ್ ಫಾರೆಸ್ಟ್ ಮಾಡಬೇಕೆಂದು ಮಾಡಿದ್ದೀರಿ. ಇರತಕ್ಕ ಮರಗಳನ್ನು ಕಡಿದು ಹೊಸದಾಗಿ ಕಾಡನ್ನು ಬೆಳೆಸುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ. ನಾನು ಆ ಬಗ್ಗೆ ಹೇಳುವುದು ಏನೆಂದರೆ ದಯವಿಟ್ಟು ಅದನ್ನು ಕೈಬಿಡಬೇಕು ಏಕೆಂದರೆ ಆ ರೀತಿ ಮಾಡಿದರೆ ಅದರಿಂದ ಅಲ್ಲಿರುವ ಕಾಡು ನಷ್ಟವಾಗುತ್ತದೆ. ಆದುದರಿಂದ ರೆವ್ಯೂನರೇಟೀವ್ ಫಾರೆಸ್ಟ್ ಮಾಡಬೇಕು ಎನ್ನುವುದನ್ನು ಕೈಬಿಟ್ಟು ಅಲ್ಲಿ ಹೊಸದಾಗಿ ಕಾಡನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ರೆವ್ಯೂನರೇಟೀವ್ ಕಾಡು ಮಾಡಬೇಕು ಎನ್ನುವ ದೃಷ್ಟಿಯಿಂದ ಆ ಕಾಡನ್ನು ಕಟ್ ಮಾಡುವುದಿಲ್ಲ. We are taking up the work of cutting up the forests on a planned basis. We have got a working plan. Even the forest has got this limitation and age and we have to meet the supplies and demands of the Forest Industries Board out of the Forest income. Therefore, we are bound, and forced by circumstances to to have the cut regularly, and in proportion of that, we are also planning to plant the trees. Utill now I do admit, since two years back, there were no working plans. After taking into consideration the various suggestions made by this hon. Hause, we are also having

(SRI K. H. PATIL)

our working plan and we are strictly following the working plan which will be more beneficial to the State.

Sri N. B. SIRDESAI —I want to know from the Government whether the Government is going to cancel all the leases of the Government forest lands that has been granted formerly *i. e.* 60 years or 70 years back ? What is the decision taken by the Government in that respect ?

Sri K. H. PATIL.—Under the law, agreements have already been entered into by the Government and the parties concerned. We are in a helpless condition to change them unless they violate the conditions. But, as the hon. members are aware, I have already surrendered the rights of granting the lands from the Minister's powers to this House.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ಸ್ವಾಮಿ, ತಮ್ಮ ಉತ್ತರದಲ್ಲಿ ನೋಡಿದರೆ ಈ ಅರಣ್ಯ ಸಂಪತ್ತಿನ ಬಗ್ಗೆ ಬೇಕಾದಷ್ಟು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎನ್ನುವುದು ಅರ್ಥವಾಗುತ್ತದೆ. ಉದಾಹರಣೆಗೆ ನಮ್ಮ ದೇಶದಲ್ಲಿರತಕ್ಕಂಥ ಗಂಧದ ಮರದ ಸಂಪತ್ತು ಹಾಳಾಗಿ ಹೋಗಿದೆ. ಅದಕ್ಕೋಸ್ಕರ ಸರ್ಕಾರದವರು ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ? ಮತ್ತು ಇದರಿಂದ ಬೇಕಾದಷ್ಟು ಫಾರಿನ್ ಎಕ್ಸ್‌ಚೇಂಜ್ ಬರುವುದರಿಂದ ಈ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಕೆ. ಪೆಚ್. ಪಾಟೀಲ್.—ಗಂಧದ ಮರದ ಕಾರ್ಖಾನೆಯಿಂದ ಸ್ಯಾಂಡಲ್‌ವುಡ್ ಆಯಿಲ್ ಮುಂತಾದವುಗಳ ಉತ್ಪತ್ತಿ ಹೆಚ್ಚಿದೆ. ಮದ್ರಾಸ್‌ನಲ್ಲಿ ಟನ್ ಒಂದಕ್ಕೆ ೩೨ ಸಾವಿರ ರೂಪಾಯಿ ಕೊಡುತ್ತಿದ್ದಾರೆ. ಆದರೆ ನಾವು ಇಲ್ಲಿ ಟನ್ ಒಂದಕ್ಕೆ ೪ ರಿಂದ ೧೦ ಸಾವಿರದವರೆಗೂ ಗಂಧದ ಮರವನ್ನು ಈ ಕಾರ್ಖಾನೆಗೆ ಕೊಡುತ್ತಿದ್ದೇವೆ. ಅಲ್ಲದೇ ಗುಧದ ಕಟ್ಟಿಗೆಯನ್ನೂ ಹೆಚ್ಚು ಮಾಡುವಂಥ ಒಂದು ಕಾರ್ಯಕ್ರಮವನ್ನೂ ಕೂಡ ಫಾರೆಸ್ಟ್ ಇಲಾಖೆಯವರು ಹಾಕಿಕೊಂಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ಈವೊತ್ತಿನ ದಿವಸ ರಸ್ತೆಗಳ ಪಕ್ಕದಲ್ಲಿ ಇರತಕ್ಕಂಥ ಮರಗಳನ್ನು ಯಾವ ರೀತಿ ರಕ್ಷಣೆ ಮಾಡಬೇಕೋ ಆ ರೀತಿ ಸರ್ಕಾರದವರು ಮಾಡುತ್ತಾ ಇಲ್ಲ. ತಾವೂ ಕೂಡ ಅನೇಕ ಸಂದರ್ಭಗಳಲ್ಲಿ ಪ್ರವಾಸ ಮಾಡುವಾಗ ಇದನ್ನು ಗಮನಿಸಿದರೆ ಗೊತ್ತಾಗುತ್ತದೆ. ಆದುದರಿಂದ ಈ ಬಗ್ಗೆ ನನ್ನ ಸಲಹೆ ಏನೆಂದರೆ ರಸ್ತೆಪಕ್ಕದಲ್ಲಿರತಕ್ಕಂಥ ಮರಗಳನ್ನು ಅಲ್ಲಿಯ ಹಿಡುವಳಿದಾರರಿಗೇನೇ ಕೊಡುವುದರಿಂದ ಆ ಮರಗಳು ಸರಿಯಾದ ರೀತಿಯಲ್ಲಿ ರಕ್ಷಣೆಯಾಗುತ್ತದೆ. ಅದುದರಿಂದ ಆ ರೀತಿ ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಕೆ. ಪೆಚ್. ಪಾಟೀಲ್.—ರಸ್ತೆಗಳಲ್ಲಿರತಕ್ಕಂಥ ಮರಗಳು ಪಿಡಬ್ಲ್ಯೂಡಿ ಇಲಾಖೆಗೆ ಸೇರಿರುವುದರಿಂದ ತಾವು ಹೇಳಿದ ವಿಷಯವನ್ನು ಪಿಡಬ್ಲ್ಯೂಡಿ ಮಂತ್ರಿಗಳಿಗೆ ರವಾನಿಸುತ್ತೇನೆ

ಶ್ರೀ ಟಿ. ಆರ್. ಶಾಮಣ್ಣ.—ಈಗ ವನಸಂಪತ್ತನ್ನು ಹೆಚ್ಚಿಸುವದಕ್ಕೋಸ್ಕರ ಫಾರೆಸ್ಟ್ ಕಾರ್ಪೋರೇಷನ್ ಅಂತ ಒಂದನ್ನು ಮಾಡಿದ್ದೀರಿ. ಇದು ಬರೇ ಪೇಪರ್‌ಪ್ಲಾನ್ ಮಾತ್ರ ಆಗಿರುತ್ತದೆ. ಆದುದರಿಂದ ನಾನು ಹೇಳುವುದು ಈ ಅರಣ್ಯ ಸಂಪತ್ತನ್ನು ಹೆಚ್ಚಿಸುವುದಕ್ಕೋಸ್ಕರ ಇದಕ್ಕೆ ಬೇಕಾದಷ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಪೆಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿರಬೇಕು. ಈಗಾಗಲೇ ಈ ಕಾರ್ಪೋರೇಷನ್ನಿಗೆ ಬೇಕಾಗುವಷ್ಟು ಹಣವನ್ನು ಮಂಜೂರು ಮಾಡಿದ್ದೇವೆ. ಅಲ್ಲದೆ ಅಗ್ರಿಕಲಚರಲ್ ರೀಫೈನಾನ್ಸ್ ಕಾರ್ಪೋರೇಷನ್ನಿನವರು ಮತ್ತು ಅನೇಕ ಬ್ಯಾಂಕ್‌ಗಳವರು ಕೂಡ ಇದಕ್ಕೆ ಹಣ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಆದರೆ ನಮ್ಮ ಅರ್ಥಸಚಿವರು ಇದಕ್ಕೆ ಬಡ್ಡಿ ಜಾಸ್ತಿ ಎಂದು ಒಂದು ವಿಷಯ ಎತ್ತಿರುವುದರಿಂದ ಇದರ ಬಗ್ಗೆ ತನಿಖೆ ನಡೆಯುತ್ತಾ ಇದೆ. ನಾನೂ ಕೂಡ ಅವರಿಗೆ ಬರೆದಿದ್ದೇನೆ. ನಮ್ಮ ಅರ್ಥ ಸಚಿವರು ಇದಕ್ಕೆ ಒಪ್ಪಿ ಆದರಿಂದ ಹಣ ಸುಗಮವಾಗಿ ಸಿಗುವಂತೆ ಮಾಡಬೇಕು ಎಂದು ಬರೆದಿದ್ದೇನೆ.